ದಿನಾಂಕ 18-01-2025 ರಂದು ಸಾಕ್ಷಿಗೆ ಪ್ರಮಾಣ ವಚನ  ಬೋಧಿಸಲಾಯಿತು.

**ಪಾಟೀ ಸವಾಲುಃ  ವಾದಿಯವರ ಪರವಾಗಿ  ಶ್ರೀ ಎ.ಎಸ್.ಬಿ. ವಕೀಲರವರಿಂದಃ**

ಈ ದಾವೆಯನ್ನು ಯಾರು ಹಾಕಿದ್ದಾರೆ ಮತ್ತು ಅದರಲ್ಲಿ ಏನೆಲ್ಲಾ ಬರೆದಿರುತ್ತಾರೆಂದು ನಾನು ಓದಿ ತಿಳಿದುಕೊಂಡಿರುತ್ತೇನೆ.  ಈ ದಾವೆಯನ್ನು ಹಾಕುವ ಸಮಯದಲ್ಲಿ ಮೂಲತಃ 4 ನೇ ವಾದಿಯವರಿಗೆ  ಜಿಪಿಎಯನ್ನು ನೀಡಿ ಈ ಪ್ರಕರಣವನ್ನು ನಡೆಸಲು ಅಧಿಕಾರವನ್ನು ನೀಡಿರುತ್ತಾರೆಂದರೆ ಸರಿ.  ಈಗ ವಾದಿಯವರ ಪರವಾಗಿ ಗುರುದತ್ ರವರು ಸಾಕ್ಷ ನುಡಿದಿರುವ ಬಗ್ಗೆ ನನ್ನದೇನೂ ತಕರಾರು

ಇರುವುದಿಲ್ಲ. ರಾಧಮ್ಮ ಶೆಡ್ತಿಯವರು ಯಾವುದೇ ವಿಲ್ ನ್ನು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಬರೆಯದೇ ಮೃತಪಟ್ಟಿರುತ್ತಾರೆಂದರೆ ಸರಿ. ರಾಧಮ್ಮ ಶೆಡ್ತಿಯವರಿಗೆ ¼ ನೇ ಹಕ್ಕು ಇರುತ್ತದೆಂದರೆ ಸರಿ. ರಾಧಮ್ಮ ಶೆಡ್ತಿಯವರಿಗೆ ¼ ನೇ ಹಕ್ಕು ಅವರ ಮಕ್ಕಳಿಗೆ ಪಾಲು ಬರುತ್ತದೆಂದರೆ ಸರಿ. ಸದ್ರಿ ದಾವಾ ಆಸ್ತಿಯಲ್ಲಿ 36 ಪಾಲು ಆಗಬೇಕು, ಅದರಲ್ಲಿ ವಾದಿಗೆ 10 ಪಾಲು ಬರಬೇಕು. ವಾದಿಯವರು ಕೇಳಿಕೊಂಡ ಹಾಗೆ ತೀರ್ಪು ಬರಲು ನನ್ನದೇನೂ ತಕರಾರು ಇರುವುದಿಲ್ಲ.

ಪಾಟೀ ಸವಾಲುಃ ಉಳಿದ ಪ್ರತಿವಾದಿಯವರು ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.